ರುಚಿಕರವಾದ ಉಪಹಾರ
ಸಿಹಿ-ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
7 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 30 ॥ ಸಂಚಿಕೆ :25॥ UDP/1263/2018-20 || R.NO.50495/91 ॥ ತಾರೀಕು: 07-07-2020॥ ರೂ 5/- ॥ ವಾರ್ಷಿಕ ಚಂದಾ : 350/- ಅಂಚೆಯಲ್ಲಿ : 500/

## ನಿರ್ಲಕ್ಷ್ಯಕ್ಕೆ ತಕ್ಕ ಶಾಸ್ತಿ ಸೋಂಕು ಸಮುದಾಯಕ್ಕೆ?



ಈಗ ಸೀಲ್‌ಡೌನ್ ಎನ್ನುವುದು ಸಾಮಾನ್ಯವಾಗಿಬಿಟ್ಟಿದೆ. ಮಹಿಳಾ ಪೋಲೀಸ್ ಕಾನ್ಸ್‌ಟೇಬಲ್ ಒಬ್ಬರಿಗೆ ಸೋಂಕು ಪತ್ತೆಯಾದ ಹಿನ್ನೆಲೆಯಲ್ಲಿ ಕೋಟತಟ್ಟುವಿನಲ್ಲಿ ಸೀಲ್‌ಡೌನ್ ಮಾಡಲಾಗಿತ್ತು.

ವಿದೇಶದಿಂದ ಮಹಾರಾಷ್ಟ್ರ ಸೇರಿದಂತೆ ಇತರ ರಾಜ್ಯಗಳಿಂದ ಕರಾವಳಿ ಜಿಲ್ಲೆಗೆ ರವಾನೆಯಾಗುತ್ತಿದ್ದ ಸೋಂಕು, ಈಗ ಬೆಂಗಳೂರಿನಲ್ಲಿ ಕೊರೊನಾ ಪಾಸಿಟಿವ್ ಪ್ರಕರಣ ಒಮ್ಮೆಲೆ ಜಾಸ್ತಿಯಾದ ಹಿನ್ನೆಲೆಯಲ್ಲಿ ಅಲ್ಲಿಂದ ಮರಳಿದವರಿಂದಲೂ ಬರುತ್ತಿದೆ. ಹೀಗಾಗಿ ಕರಾವಳಿಯ ದ.ಕ. ಉಡುಪಿ ಜಿಲ್ಲೆಯಲ್ಲಿ ಸೋಂಕು ಸಮುದಾಯಕ್ಕೆ ವಿಸ್ತರಿಸುವ ಆತಂಕ ಎದುರಾಗಿದೆ. ಜಿಲ್ಲಾಡಳಿತ ಎಲ್ಲಾ ವ್ಯವಸ್ಥೆ ಎಚ್ಚರಿಕೆಯಿಂದ ಕೈಗೊಳ್ಳುತ್ತಿದ್ದರೂ ಕೆಲವರ ನಿರ್ಲಕ್ಷ್ಯದಿಂದ ಇಂದು ಪೋಲೀಸರು, ವೈದ್ಯಕೀಯ ಸಿಬ್ಬಂದಿಗಳು, ಸ್ಥಳೀಯ ಜನಸಾಮಾನ್ಯರಲ್ಲೂ ಕಾಣಿಸಿಕೊಳ್ಳುತ್ತಿರುವುದು ಕಳವಳಕ್ಕೆ ಕಾರಣವಾಗುತ್ತಿದೆ.

ಕುಂದಾಪುರದಲ್ಲಿ ಹೊರ ರಾಜ್ಯಗಳಿಂದ ಮರಳಿದವರಿಗೆ ಸೋಂಕು ಕಾಣಿಸಿಕೊಳ್ಳುತ್ತಿದ್ದರೂ ಅವರಿಗಾಗಿ ಹೋಂ ಕ್ವಾರಂಟೈನ್, ಆಸ್ಪತ್ರೆ ಐಸೋಲೇಶನ್ ವ್ಯವಸ್ಥೆ ಮಾಡಿರುವುದರಿಂದ ಸಾರ್ವಜನಿಕರಿಗೆ ಆತಂಕವಿರಲಿಲ್ಲ. ಆದರೆ ಇತ್ತೀಚೆಗೆ ಪೋಲೀಸರಲ್ಲೂ ಸೋಂಕು ಪತ್ತೆಯಾಗಿದೆ. ಕುಂದಾಪುರದ ಟ್ರಾಫಿಕ್ ಹೆಡ್ ಕಾನ್ಸ್‌ಟೇಬಲ್ ಒಬ್ಬರಿಗೆ ಸೋಂಕು ಕಾಣಿಸಿಕೊಂಡು ಠಾಣೆ, ಕ್ವಾಟರ್ಸ್ ಸೀಲ್‌ಡೌನ್ ಮಾಡಬೇಕಾಯಿತು.

ಕೋಟದ ಜನಪ್ರಿಯ ಹೋಟೆಲ್ ಮಾಲಕರು, ಸಿಬ್ಬಂದಿಗಳಲ್ಲಿ ಪಕ್ಕದ ಅಂಗಡಿ ಮಾಲಕರ ಕುಟುಂಬದವರಲ್ಲಿ, ಸಾಲಿಗ್ರಾಮದ ಮೆಡಿಕಲ್ ರೆಪ್ ಒಬ್ಬರಲ್ಲಿ ಸೋಂಕು ಕಾಣಿಸಿಕೊಂಡದ್ದು ಗ್ರಾಮಸ್ಥರು ಆತಂಕಕ್ಕೆ ಒಳಗಾಗಿದ್ದಾರೆ.

ಉಡುಪಿ ಸಹಿತ ಜಿಲ್ಲೆಯ ಕೆಲವು ಹೋಟೆಲ್‌ಗಳ ಸಿಬ್ಬಂದಿಗಳಲ್ಲಿ ಸೋಂಕು ಪತ್ತೆಯಾಗಿ ಹೋಟೆಲ್ ಸೀಲ್‌ಡೌನ್ ಆದ ವಿಚಾರ ತಿಳಿದು ಕೆಲವು ಖಾಸಗಿ ಬ್ಯಾಂಕ್ ಸಹಿತ ಸಂಸ್ಥೆಗಳ ಆಡಳಿತದವರು, ಹೋಟೆಲ್‌ಗಳಿಗೆ ಭೇಟಿ ನೀಡದಿರುವಂತೆ ಆದೇಶಿಸಿದೆ ಎನ್ನಲಾಗಿದೆ. ಈ ವಿದ್ಯಮಾನ ಹೋಟೆಲ್ ಮಾಲಕರಿಗೂ, ಹೋಟೇಲನ್ನೇ ಊಟ, ಉಪಹಾರಕ್ಕೆ ಹೊಂದಿಕೊಂಡಿದ್ದವರಿಗೂ ಸಮಸ್ಯೆಯಾಗಿದೆ.

ಈ ರೀತಿ ಸಮುದಾಯಕ್ಕೆ ಸೋಂಕು ಹರಡಲು ಹಲವರ ಬೇಜವಾಬ್ದಾರಿತನವೇ ಕಾರಣವಾಗುತ್ತಿದ್ದು ತಮ್ಮ ಪ್ರಯಾಣದ ವಿಚಾರ ಮುಚ್ಚಿಡುವುದು, ಅಜಾಗರೂಕತೆಯಿಂದ ನಿಯಮ ಪಾಲಿಸದೇ ಇರುವುದು, ಗುಂಪುಗೂಡಿ ಪಾರ್ಟಿ ಮಾಡುವುದು, ಊಟ ಮಾಡುವುದು, ಮಕ್ಕಳನ್ನು ಸಾರ್ವಜನಿಕವಾಗಿ ತಿರುಗಾಡಿಸುವುದು ಕಾರಣ ಎಂದು ಆರೋಗ್ಯಾಧಿಕಾರಿಗಳು ಅಭಿಪ್ರಾಯ ಪಡುತ್ತಾರೆ.

ಅಜಾಗರೂಕತೆಗೆ ತಕ್ಕ ಶಾಸ್ತ್ರಿ ಮಾಡಲಾಗುವುದು ಜಿಲ್ಲಾಡಳಿತ ಎಚ್ಚರಿಕೆ ನೀಡಿದೆ. ಮದುವೆ, ಶುಭಕಾರ್ಯಗಳ , ಧಾರ್ಮಿಕ ಕಾರ್ಯಗಳ ಹೆಸರಲ್ಲಿ ಹೆಚ್ಚು ಜನ ಸೇರುತ್ತಿರುವುದು ಜಿಲ್ಲಾಡಳಿತ ಗಮನಿಸಿದ್ದು, ತಾಲ್ಲೂಕು ಅಧಿಕಾರಿಗಳಿಗೆ ತಪಾಸಣೆ ಮಾಡುವಂತೆ ತಿಳಿಸಲಾಗಿದೆ.

## ಕುಂದಾಪುರದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಸಚಿವ ಸಿಟಿ ರವಿ ಭರವಸೆ

ಪ್ರಾಕೃತಿಕವಾಗಿ ಉತ್ತಮ ಸಂಪನ್ಮೂಲ ಹೊಂದಿರುವ , ಹಲವು ವಿಷಯಗಳಲ್ಲಿ ಖ್ಯಾತಿ ಪಡೆದಿರುವ ಕುಂದಾಪುರವನ್ನು ಪ್ರವಾಸೋದ್ಯಮ ಕೇಂದ್ರವಾಗಿ ಅಭಿವೃದ್ಧಿ ಪಡಿಸಲು ಸಾರ್ವಜನಿಕರ ಸಹಕಾರ ದೊಂದಿಗೆ ಪ್ರವಾಸೋದ್ಯಮ ಇಲಾಖೆ ಕೆಲಸ ಮಾಡಲಿದೆ ಎಂದು ಕರ್ನಾಟಕ ಪ್ರವಾಸೋದ್ಯಮ ಸಚಿವ ಸಿ.ಟಿ. ರವಿ ತಿಳಿಸಿದ್ದಾರೆ.

ಭಾರತೀಯ ವಿಕಾಸ ಟ್ರಸ್ಟ್ ಕುಂದಾಪುರ ಅಭಿವೃದ್ಧಿ ಕುರಿತು ಜೂನ್ 30 ರಂದು ಏರ್ಪಡಿಸಿದ ವಿಚಾರ ವಿನಿಮಯ ಕಾರ್ಯಕ್ರಮದ ಬಗ್ಗೆ ವಿಡಿಯೋ, ಸಂದೇಶ ಕಳುಹಿಸುವ ಮೂಲಕ ಸ್ಪಂದಿಸಿರುವ ಸಚಿವರು, ಅಗತ್ಯ ಮಾಹಿತಿಗಳನ್ನು ಒದಗಿಸಿರಿ, ಅಧಿಕಾರಿಗಳೊಂದಿಗೆ ಕುಳಿತು ಈ ಬಗ್ಗೆ ಯೋಜನೆ ರೂಪಿಸೋಣ ಎಂದಿದ್ದಾರೆ.

ಕುಂದಾಪುರ ಭಂಡಾರ್‌ಕಾರ್ಸ್ ಕಾಲೇಜಿನಲ್ಲಿ ಭಾರತೀಯ ವಿಕಾಸ ಟ್ರಸ್ಟ್ ಮತ್ತು ಸೆಲ್ಕೊ ಫೌಂಡೇಶನ್ ಏರ್ಪಡಿಸಿದ ಕಾರ್ಯಕ್ರಮದಲ್ಲಿ ಸಮೀಕ್ಷೆಯಲ್ಲಿ ಕಂಡು ಬಂದ ಅಂಶಗಳ ಬಗ್ಗೆ ವಿವರಿಸಲಾಯಿತು.

ಬಿವಿಟಿ ಮಣಿಪಾಲದ ಹಿರಿಯ ಸಲಹೆಗಾರರಾದ ಬಾಲಸುಬ್ರಹ್ಮಣ್ಯ ಮಾತನಾಡಿ "ಕುಂದಾಪುರ ಪ್ರವಾಸೋದ್ಯಮ ಅಭಿವೃದ್ಧಿ ಕುರಿತು ಸಚಿವರೊಂದಿಗೆ ವಿಚಾರ ವಿನಿಮಯ ಮಾಡಿದ್ದು ಅವರು ಪೂರಕವಾಗಿ ಸ್ಪಂದಿಸಿದ್ದಾರೆ. ಹಲವು ವಿಚಾರಗಳನ್ನು ನಾವು ಈ ಹಿಂದೆ ಚರ್ಚಿಸಿದ್ದೇವೆ. ಮುಂದೆ ಆಗಬೇಕಾಗಿರುವ ಕೆಲಸಗಳ ಬಗ್ಗೆ ವಿಚಾರ ವಿನಿಮಯ ನಡೆಸೋಣ. ಒಂದು ಮೂವರು ಮಂದಿಯ ಸಮಿತಿ ರಚಿಸಿ ಸರಕಾರ ದೊಂದಿಗೆ ಸಂವಹನಕ್ಕೆ ಪ್ರಯತ್ನಿಸೋಣ . ಭಾರತೀಯ ವಿಕಾಸ ಟ್ರಸ್ಟ್ ಈ ಬಗ್ಗೆ ಸತತ ಪ್ರಯತ್ನ ನಡೆಸಲಿದೆ" ಎಂದರು.

ಕುಂದಾಪುರ ವಿಶನ್- 2030 ಪರಿಕಲ್ಪನೆಯಲ್ಲಿ ಆರಂಭವಾದ ಸಮೀಕ್ಷೆ ಯೋಜನೆ, ಲಾಕ್‌ಡೌನ್ ಕಾರಣದಿಂದ ಸ್ವಲ್ಪ



ಹಿಂದೆ ಬಿದ್ದರೂ ಇರುವ ಅವಕಾಶದಲ್ಲಿ ನಾವು ಮುಂದುವರೆಯೋಣ ಎಂದು ಎಲ್ಲರನ್ನು ಸ್ವಾಗತಿಸುತ್ತಾ ಯೋಜನಾ ವ್ಯವಸ್ಥಾಪಕ ಅರುಣ ಪಟವರ್ಧನ್ ಹೇಳಿದರು.

ಬಿವಿಟಿ ಮುಖ್ಯ ವ್ಯವಸ್ಥಾಪಕ ಮನೋಹರ ಕಟ್ಗೇರಿ ಮಾತನಾಡಿ ಕುಂದಾಪುರ ಜನರು ಸಮೀಕ್ಷೆಯಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಹೆಚ್ಚು ಮಹತ್ವ ನೀಡಿದ್ದಾರೆ" ಎಂದರು.

ಅಭಿನಂದನ ಶೆಟ್ಟಿ, ಮುನಿಯಾಲು ಗಣೇಶ್ ಶೆಣೈ, ಡಾ। ಉತ್ತಮ ಕುಮಾರ್ ಶೆಟ್ಟಿ, ಬಿ.ಕಿಶೋರ್ ಕುಮಾರ್, ಪ್ರವೀಣ್ ಕುಮಾರ್, ದಿನಕರ ಶೆಟ್ಟಿ ಕಂದಾವರ , ಕೆಂಚನೂರು ಸೋಮಶೇಖರ ಶೆಟ್ಟಿ, ಚಂದ್ರಕಾಂತ ಶೆಣೈ, ಜಿ.ಪ. ಇಂಜಿನಿಯರ್ ರವಿಶಂಕರ್, ಹುಸೇನ್ ಹೈಕಾಡಿ , ಹರ್ಬಟ್ ಡಿಸೋಜಾ , ವೆಂಕಟೇಶ, ಭರತ ಬಂಗೇರ, ಅನುದೀಪ, ಜಾಯ್ ಕಾರ್ವಲ್ಲೊ ಮೊದಲಾದವರು ತಮ್ಮ ಅಭಿಪ್ರಾಯ ಮಂಡಿಸಿದರು.

ಯು.ಎಸ್.ಶೆಣೈ ಮಾತನಾಡಿ ಈ ಹಿಂದೆ 2009ರಿಂದ ಈ ತನಕ ಕುಂದಾಪುರದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಸಂಘಟನೆಗಳು ಮಾಡಿದ ಪ್ರಯತ್ನ ವಿವರಿಸಿದರು.

ರಾಘವೇಂದ್ರಆಚಾರ್ಯ ವಂದಿಸಿದರು.

**ಹೂಳೆತ್ತುವ ಕೆಲಸವಾಗಲಿ :**

ಪಂಚಗಂಗಾವಳಿ ನದಿಯಲ್ಲಿ ಹೂಳೆತ್ತುವ ಕೆಲಸ ನಡೆದರೆ ಪ್ರವಾಸೋದ್ಯಮ ಚಟುವಟಿಕೆಗೆ, ಅನುಕೂಲವಾಗುತ್ತದೆ. ದೋಣಿ ವಿಹಾರಕ್ಕೆ ಇದು ಅಗತ್ಯ.

ಅಭಿನಂದನ ಶೆಟ್ಟಿ

**ಹೊಸ ಕಲ್ಪನೆ ಮೂಡಬೇಕು :**

ಪ್ರವಾಸೋದ್ಯಮ ಅಭಿವೃದ್ಧಿಗೆ ನದಿ, ಸಾಗರ ತೀರದ ಚಟುವಟಿಕೆಯಿಲ್ಲದೇ ಇಲ್ಲಿನ ಸಸ್ಯ ಸಂಪತ್ತು, ಸಂಸ್ಕೃತಿ, ಕಲೆ ವಿಶಿಷ್ಟ ಆಹಾರ ಪದ್ಧತಿಗಳ ಪರಿಚಯ ನೀಡುವ ಕಾರ್ಯವೂ ಆಗಬೇಕು.

ಮುನಿಯಾಲ್ ಗಣೇಶ್ ಶೆಣೈ

**ಸಿಆರ್‌ಝಡ್ ಸಮಸ್ಯೆ :**

ಕರಾವಳಿಯಲ್ಲಿ ಸಿಆರ್‌ಝಡ್ ಸಮಸ್ಯೆ ಪ್ರವಾಸೋದ್ಯಮ ಚಟುವಟಿಕೆಗಳಿಗೆ ಹಿನ್ನೆಡೆಯಾಗಿದ್ದು ಅದನ್ನು ಗೋವಾ, ಕೇರಳದಂತೆ ನಿಯಮ ಅನುಷ್ಠಾನಗೊಳಿಸಿ ಸರಿಪಡಿಸಬೇಕು.

ಕಂದಾವರ ದಿನಕರ ಶೆಟ್ಟಿ

**ಬಬ್ಬುಕುದ್ರು ಅಭಿವೃದ್ಧಿಯಾಗಲಿ**

ಕುಂದಾಪುರದ ಬಳಿ ಇರುವ ಬಬ್ಬುಕುದ್ರು ಪ್ರವಾಸೋದ್ಯಮ ಅಭಿವೃದ್ಧಿಗೆ ಅತ್ಯುತ್ತಮ ಸ್ಥಳ. ಅದರ ಅಭಿವೃದ್ಧಿಗಾಗಿ ಸ್ಪಷ್ಟ ಯೋಜನೆ ರೂಪಿಸಬೇಕು. ರಿಂಗ್‌ರೋಡ್ ವಿಸ್ತರಣೆಯಾಗಬೇಕು.

ಕಿಶೋರ್ ಕುಮಾರ್

**ಪರ್ಯಾಯ ಮಾರ್ಗ ಅಗತ್ಯ :**

ಕುಂದಾಪುರಕ್ಕೇನುಬೇಕು ಎಂಬ ಬಗ್ಗೆ ಸ್ಥಳೀಯರ ಅಭಿಪ್ರಾಯ ಕಡೆಗಣಿಸಲಾಗುತ್ತಿದೆ.

ಸೋಮಶೇಖರ ಶೆಟ್ಟಿ, ಕೆಂಚನೂರು

**ಒಳಚರಂಡಿ, ಫ್ಲೈಓವರ್ :**

ಒಳ ಚರಂಡಿ ಯೋಜನೆ, ಫ್ಲೈ ಓವರ್ ಸಮಸ್ಯೆ ಕುಂದಾಪುರ ಅಭಿವೃದ್ಧಿಗೆ ತಡೆಯಾಗಿದೆ. ಕಾಮಗಾರಿ ಬಗ್ಗೆ ಗಂಭೀರವಾಗಿ ಗಮನ ಹರಿಸಬೇಕು. ಕಡಲ ತೀರ ಸ್ವಚ್ಛತೆ ಬಗ್ಗೆ ಜಿ.ಪ. ಯೋಜನೆ ಅನುಷ್ಠಾನಗೊಳ್ಳುತ್ತಿದೆ.

ರವಿಶಂಕರ್,ಜಿ.ಪ. ಇಂಜಿನಿಯರ್

## ಅಲಾಯನ್ಸ್ ಕ್ಲಬ್ ಜಿಲ್ಲಾ ಗವರ್ನರ್ ಆಗಿ ಉಡುಪಿಯ ಡಾ.ನವೀನಾ ಶೆಟ್ಟಿಗಾರ್

ಅಲಾಯನ್ಸ್ ಕ್ಲಬ್ ಇಂಟರ್‌ನ್ಯಾಶನಲ್ ಜಿಲ್ಲೆ -131ರ ನೂತನ ಜಿಲ್ಲಾ ಗವರ್ನರ್ ಆಗಿ ಉಡುಪಿಯವರಾಗಿದ್ದು ಬೆಳಗಾವಿಯಲ್ಲಿ ಜಿ.ಜಿ. ಚಿಟ್ನಿಸ್ ಇಂಗ್ಲೀಷ್ ಮೀಡಿಯಂ ಹೈಸ್ಕೂಲ್ ಪ್ರಾಂಶುಪಾಲರಾದ ಡಾ.ನವೀನಾ ಶೆಟ್ಟಿಗಾರ್ ಜುಲೈ 11 ರಂದು ಅಧಿಕಾರ ಸ್ವೀಕರಿಸಲಿದ್ದಾರೆ.

ಅಲಾಯನ್ಸ್ ಜಿಲ್ಲಾ ಸ್ಥಾಪಕ ಗವರ್ನರ್, ಖ್ಯಾತ ನ್ಯಾಯವಾದಿ ಬಾಳ್ಕುದ್ರು ದಿನಕರ ಶೆಟ್ಟಿಯವರು ಪದ ಪ್ರದಾನ ಮಾಡಲಿದ್ದಾರೆ. ಇಬ್ಬರೂ ಉಡುಪಿ ಜಿಲ್ಲೆಯವರೇ ಆಗಿದ್ದು ಅಲಾಯನ್ಸ್ ಜಿಲ್ಲಾ ಸಮಿತಿ ಪದ ಪ್ರದಾನದಲ್ಲಿ ಪ್ರಮುಖರಾಗಿರುವುದು ವಿಶೇಷ.



ಡಾ.ನವೀನಾ ಶೆಟ್ಟಿಗಾರ್ ದೇಶದ ಅಲಾಯನ್ಸ್ ಕ್ಲಬ್ ಇತಿಹಾಸದಲ್ಲಿ ಪ್ರಥಮ ಮಹಿಳಾ ಗವರ್ನರ್ ಆಗಿದ್ದಾರೆ. ಎಂ.ಎ. ಪದವೀಧರೆಯಾಗಿರುವ ಇವರು ಸಾರ್ಕ್ ರಾಷ್ಟ್ರಗಳ ಐಇ ಯುನಿವರ್ಸಿಟಿಯಿಂದ ಡಿಲಿಟ್ ಪಡೆದಿದ್ದಾರೆ. ಪ್ರತಿಭಾವಂತರಾಗಿದ್ದು ಬಹುಭಾಷಾ ಪ್ರವೀಣರಾಗಿರುವ ಇವರು ತಮ್ಮ ಸಾಧನೆಗೆ ಸಮಾಜದಿಂದ ಹಲವು ಗೌರವ ಪಡೆದಿದ್ದಾರೆ.

ಬೆಳಗಾವಿಯ ಸ್ಕೈ ಪಾರ್ಕ್ ಗ್ಯಾಲಕ್ಸಿ ಹಾಲ್‌ನಲ್ಲಿ ಜುಲೈ 11 ರಂದು ಮಧ್ಯಾಹ್ನ 12 ಘಂಟೆಗೆ ನಡೆಯುವ ಸಮಾರಂಭದಲ್ಲಿ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಶಂಕರಗೌಡ ಪಾಟೀಲ್ ಸಹಿತ ಅಲಾಯನ್ಸ್ ಕ್ಲಬ್ಸ್ ಇಂಟರ್‌ನ್ಯಾಶನಲ್‌ನ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ.

